# ಮಳೆಯಲ್ಲಿ ಮಿಂದ ಮೋಹಕ ಕೀಟಗಳು!



ಚಿಗುರೆಲೆಯ ಮೇಲೆ ಕಂಡು ಬಂದ ಕ್ರಿಂಸನ್ ರೋಸ್ ಕಂಬಳಿ ಹುಳು ಮತ್ತು ಕಪ್ಪುಬಣ್ಣದ ಜೇಡ.

**ಹಸಿರು ಗರಿಕೆ, ಚಿಗುರಿದ ಎಲೆ ಹಾಗೂ ಇಬ್ಬನಿ ಹರಡಿದ ಹೂಗಳ ಮೇಲೆ ಈ ಪುಟ್ಟ ಕೀಟಗಳನ್ನು ನೋಡುವುದು, ಫೋಟೋ ಕ್ಲಿಕ್ಕಿಸುವುದು ಮುದ ನೀಡುವ ಕೆಲಸವೇ ಸರಿ.**

ಚಿತ್ರ ಬರಹ:
**ಮಲ್ಲಿಕಾರ್ಜುನ ಡಿ.ಜಿ.**



ಮಳೆನೀರಿನಿಂದ ನೆನೆಯದಂತೆ ಒಂದರ ಮೇಲೊಂದು ಹತ್ತಿ ಕುಳಿತ ದುಂಬಿಗಳು.

ಮೋಡಗಳು ಭುವಿಯನ್ನು ಮಳೆಯಿಂದ ನೆನೆಸಿದರೆ, ಮತ್ತೊಂದೆಡೆ ಸದ್ದಿಲ್ಲದೆ ಪುಟ್ಟ ಪುಟ್ಟ ಜೀವಿಗಳು ಕಂಡೂ ಕಾಣದಂತೆ ತಮ್ಮ ಇರುವನ್ನು ತೋರದೆಯೂ ತೋರುವಂತೆ ಮಳೆಯಲ್ಲಿ ತೊಯ್ಯುತ್ತಾ ಅಚ್ಚರಿಗೊಳಿಸುತ್ತಿವೆ.

ಹತ್ತಿರದಿಂದ ಗಮನಿಸಿದಾಗ ಸಣ್ಣ ಆಕಾರವೆಂದು ತಳ್ಳಿಹಾಕದಂತೆ ವಿವಿಧ ಬಣ್ಣ ಮತ್ತು ರೂಪಗಳಿಂದ ಅವು ಆಕರ್ಷಿಸುತ್ತವೆ. ಸೂಕ್ಷ್ಮವಾಗಿ ಅಭ್ಯಸಿಸಿದಾಗ ಅವುಗಳ ವರ್ತನೆ ಮತ್ತು ಜೀವನಕ್ರಮ ಅಚ್ಚರಿಯನ್ನು ಉಂಟು ಮಾಡುತ್ತದೆ.

ಕಪ್ಪು, ಬಿಳಿ ಹಾಗೂ ಇನ್ನಿತರ ಬಣ್ಣಗಳ ಪುಟಾಣಿ ಜೇಡಗಳು ಕಿರುಗಾತ್ರದ ಎಲೆಗಳ ಮರೆಯಲ್ಲಿ ಕಂಡು ಬಂದರೆ, ಮೊಟ್ಟೆಯಿಂದ ಹೊರ ಬಂದಿರುವ ವೈವಿಧ್ಯ ರೂಪದ ಕಂಬಳಿ ಹುಳುಗಳು ತಮ್ಮ ಆಹಾರದ ಅನ್ವೇಷಣೆಯಲ್ಲಿ ತೊಡಗಿವೆ. ರೆಕ್ಕೆಯೆಲ್ಲಾ ನೆನೆಸಿಕೊಂಡ ಚಿಟ್ಟೆ ಬಿಸಿಲಿಗಾಗಿ ಹಾತೊರೆದರೆ, ದುಂಬಿಗಳು ನೀರಿನಿಂದ ನೆನೆಯದಂತೆ ಒಂದರ ಮೇಲೊಂದು ಕುಳಿತುಕೊಂಡಿವೆ. ತನ್ನ ಮೊಟ್ಟೆಗಳನ್ನು ಭದ್ರಪಡಿಸಿಡುವ ಜವಾಬ್ದಾರಿ ಜೇಡನದ್ದಾದರೆ, ಕಂಬಳಿ ಹುಳುವಿನದ್ದು ಆಹಾರದ ಚಿಂತೆಯಾಗಿದೆ.

(8ನೇ ಪುಟ ನೋಡಿ)